ಬಿ ಎಲ್ ಡಿ ಇ ಸಂಸ್ಥೆಯ

# ಬಸವೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ

## ಬಸವನ ಬಾಗೇವಾಡಿ

ನ್ಯಾಕ ಸಂಸ್ಥೆಯಿಂದ 'ಬಿ' ಮಾನ್ಯತೆ ಪಡೆದಿದೆ

ಇ ಮೆಲ್ : principal.bacc@gmail.com ಅಂತರ್ಜಾಲ ; bldeabacc.ac.in
ದೂರವಾಣಿ: +919606442612

ಕಳಬೇಡ ಕೊಲಬೇಡ,
ಹುಸಿಯ ನುಡಿಯಲು ಬೇಡ,
ಮುನಿಯ ಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಗಶುದ್ಧಿ! ಇದೇ ಬಹಿರಂಗಶುದ್ಧಿ!
ಇದೇ ನಮ್ಮ ಕೂಡಲಸಂಗಮನೊಲಿಸುವ ಪರಿ.







**ಜ್ಞಾನಯೋಗಿ ಪ.ಪೂ. ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು**

**ಜ್ಞಾನಯೋಗಾಶ್ರಮ, ವಿಜಯಪುರ**

## ಅಂತಿಮ ನೆನಹು

"ಸತ್ಯವೂ ಇಲ್ಲ, ಅಸತ್ಯವೂ ಇಲ್ಲ.
ಸಹಜವೂ ಇಲ್ಲ, ಅಸಹಜವೂ ಇಲ್ಲ.
ನಾನು ಇಲ್ಲ, ನೀನೂ ಇಲ್ಲ.
ಇಲ್ಲ, ಇಲ್ಲ ಎಂಬುದು ತಾನಿಲ್ಲ.
ಗುಹೇಶ್ವರನರಂಬುದು ತಾ ಬಯಲು"

## ಸಂಸ್ಥಾಪಕರು


Dr. Fa. Gu. Halakatti


H.H. Shri Banthanal Swamiji


Dr. B. M. Patil

### ನಮ್ಮ ಸಂಸ್ಥೆಯ ಹೆಮ್ಮೆಯ ಅಧ್ಯಕ್ಷರು



**ಡಾ. ಎಂ. ಬಿ. ಪಾಟೀಲ**
ಮಾನ್ಯ ಶಾಸಕರು ಬಬಲೇಶ್ವರ ಮತಕ್ಷೇತ್ರ

# ಮಹಾವಿದ್ಯಾಲಯದ ದೃಷ್ಠಿ ಮತ್ತು ಧ್ಯೇಯಗಳು

## ದೃಷ್ಟಿ

**ಜಾಗತಿಕ ಸವಾಲುಗಳನ್ನು ಎದುರಿಸಲು ಗ್ರಾಮೀಣ ವಿದ್ಯಾರ್ಥಿಗಳ ಸಬಲೀಕರಣ**

## ಧೇಯ.

1) ಮೌಲಿಕ ಶಿಕ್ಷಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
2) ಪ್ರಮುಖ ಮೌಲ್ಯಗಳನ್ನು ಬೋದಿಸುವುದು.
3) ಸಮಗ್ರ ಪ್ರಗತಿಗೆ ಸಹಾಯ ಮಾಡುವುದು
4) ಸ್ಪರ್ದಾತ್ಮಕ ಜಗತ್ತಿನ ಸವಾಲುಗಳನ್ನು ಎದುರಿಸುವಂತೆ ವಿದ್ಯಾರ್ಥಿಗಳನ್ನು ಸಬಲರನ್ನಾಗಿಸುವುದು.

## ಉದ್ದೇಶ

1) ವಿದ್ಯಾರ್ಥಿಗಳಿಗೆ ಕಲೆ ಮತ್ತು ವಾಣಿಜ್ಯ ಜ್ಞಾನ ಪಡೆಯಲು ಸಹಾಯ ಮಾಡುವುದು.
2) ಪರಿಸರ, ನೈಸರ್ಗಿಕ ಸಮತೋಲನ ಮತ್ತು ಪರಂಪರೆಯ ಬಗೆಗೆ ಸಂವೇದನೆ ಗೊಳಿಸುವುದು
3) ರಾಷ್ಟ್ರೀಯ ಸಮಗ್ರತೆಯ ಭಾವನೆಗಳನ್ನು ಸಂವರ್ಧಿಸುವುದು.
4) ಉದ್ಯೋಗ ಮಾರ್ಗದರ್ಶನ ಮತ್ತು ಸಮಾಲೋಚನೆ ಮಾಡುವುದು.
5) ವಿದ್ಯಾರ್ಥಿಗಳನ್ನು ದೈಹಿಕವಾಗಿ ಸದೃಢ ಮಾನಸಿಕವಾಗಿ ಸ್ವಾಸ್ಥ್ಯ ಭಾವನಾತ್ಮಕವಾಗಿ ಸಮತೋಲನ ಸಾಮಾಜಿಕ ಶ್ಲಾಘನೀಯರನ್ನಾಗಿ ಮಾಡುವದು.

# ಬಿ.ಎಲ್.ಡಿ.ಇ. ಸಂಸ್ಥೆಯ ಆಡಳಿತ ಮಂಡಳಿ

| | | |
|---|---|---|
| 1) | ಶ್ರೀ ಎಮ್.ಬಿ.ಪಾಟೀಲ ಬಿ.ಇ.<br>ಮಾನ್ಯ ಶಾಸಕರು | ಅಧ್ಯಕ್ಷರು |
| 2) | ಶ್ರೀ ಜಿ.ಕೆ.ಪಾಟೀಲ ನಿವೃತ್ತ ಎಮ್.ಎಲ್.ಸಿ | ಪ್ರಧಾನ ಕಾರ್ಯದರ್ಶಿಗಳು |
| 3) | ಶ್ರೀ ಎನ್.ಎಸ್.ಅಳ್ಳೊಳ್ಳಿ | ನಿರ್ದೇಶಕರು |
| 4) | ಶ್ರೀ ಅಶೋಕ.ಜಿ.ವಾರದ | ನಿರ್ದೇಶಕರು |
| 5) | ಶ್ರೀ ಚಂದ್ರಶೇಖರ ದೇಸಾಯಿ | ನಿರ್ದೇಶಕರು |
| 6) | ಶ್ರೀ ಎ.ಎಮ್. ಪಾಟೀಲ | ನಿರ್ದೇಶಕರು |
| 7) | ಶ್ರೀ ಕೆ.ಕೆ.ಪಾಟೀಲ | ನಿರ್ದೇಶಕರು |
| 8) | ಶ್ರೀ ಎಸ್.ಬಿ.ಪಾಟೀಲ | ನಿರ್ದೇಶಕರು |
| 9) | ಶ್ರೀ ಬಿ.ಎಮ್.ಪಾಟೀಲ | ನಿರ್ದೇಶಕರು |
| 10) | ಶ್ರೀ ಎಸ್.ಜಿ.ಸಜ್ಜನ | ನಿರ್ದೇಶಕರು |
| 11) | ಶ್ರೀ ಎಮ್.ಎಸ್.ಹಿರೇಮಠ | ನಿರ್ದೇಶಕರು |
| 12) | ಶ್ರೀ ಎಸ್.ಬಿ.ಪಾಟೀಲ | ನಿರ್ದೇಶಕರು |
| 13) | ಶ್ರೀ ಎ.ಬಿ .ಪಾಟೀಲ | ನಿರ್ದೇಶಕರು |
| 14) | ಶ್ರೀ ವಿ.ಎಸ್.ಪಾಟೀಲ | ನಿರ್ದೇಶಕರು |

# ಸಂಸ್ಥೆಯ ಕಿರು ಪರಿಚಯ

ಶಿಕ್ಷಣ ಕ್ಷೇತ್ರದಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯು ಪ್ರಸಿದ್ಧಿಯನ್ನು ಪಡೆದಿದೆ. ಇದು ಉತ್ತರ ಕರ್ನಾಟಕದ ವಿಜಯಪುರದಲ್ಲಿ ಬಹುಸಂಖ್ಯಾತ ಪ್ರಖ್ಯಾತ ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕಿದ ಕೀರ್ತಿಗೆ ಭಾಜನವಾಗಿದೆ. ಈ ಸಂಸ್ಥೆ ಹುಟ್ಟುಹಾಕಿದ ಶೈಶವಾವಸ್ಥೆಯ ಸಂಸ್ಥೆಗಳು ಈಗ ಬೆಳೆದು ಜ್ಞಾನ ಸುಗಂಧ ಸೂಸುವ ಸುಂದರ ಪುಷ್ಪಗಳಾಗಿ ಕಂಗೊಳಿಸುತ್ತಿವೆ.. ಇವುಗಳಲ್ಲಿ ಕೆಲವು ಸಾಮಾನ್ಯ ಶಿಕ್ಷಣಕ್ಕೆ ಮೀಸಲಾದರೆ ಇನ್ನೂ ಕೆಲವು ವೈದ್ಯಕೀಯ, ಅಭಿಯಾಂತ್ರಿಕ, ತಾಂತ್ರಿಕ, ಶಿಕ್ಷಣ, ನರ್ಸಿಂಗ ಶಿಕ್ಷಣಕ್ಕೆ ಮೀಸಲಾಗಿವೆ.

ಗ್ರಾಮೀಣ ಪ್ರದೇಶಗಳಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಹಿಂದುಳಿದ ಸ್ಥಳಗಳಲ್ಲಿ ದುರ್ಬಲ ವರ್ಗಗಳ ಏಳ್ಗೆಗಾಗಿ ಬಿ.ಎಲ್.ಡಿ.ಇ.ಸಂಸ್ಥೆಯು ಉನ್ನತ ಶಿಕ್ಷಣ ಪ್ರಸಾರದ ಸವಲತ್ತುಗಳನ್ನು ವಿಸ್ತರಿಸಿದೆ. ಈ ಉದಾತ್ತ ಹೆಬ್ಬಯಕೆಯಿಂದ ಜೂನ್ 1982 ರಲ್ಲಿ ಬಸವನ ಬಾಗೇವಾಡಿಯಲ್ಲಿ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯವನ್ನು ಸ್ಥಾಪಿಸಿತು.

ಈ ಮಹಾವಿದ್ಯಾಲಯವು ಶ್ರೇಷ್ಠ ಸಮಾಜ ಸುಧಾರಕ, ತತ್ವಜ್ಞಾನಿ, ಜಗಜ್ಯೋತಿ ಶ್ರೀ ಬಸವೇಶ್ವರರ ಜೀವನತತ್ವ, ಆದರ್ಶಗಳನ್ನು ಸಾರುವದಕ್ಕಾಗಿ ಅವರ ಹೆಸರನ್ನು ಧರಿಸಿದೆ.

ಈ ಮಹಾವಿದ್ಯಾಲಯವು ಬೆಳಗಾವಿಯ ರಾಣಿ ಚೆನ್ನಮ್ಮಾ ವಿಶ್ವವಿದ್ಯಾಲಯದ ಶಾಶ್ವತ ಸಂಯೋಜನೆಯನ್ನು ಹೊಂದಿದ್ದು ಬಸವನ ಬಾಗೇವಾಡಿಯ ವಿಜಯಪುರ ರಸ್ತೆಯಲ್ಲಿ 16 ಎಕರೆ ವಿಸ್ತೀರ್ಣ ಜಮೀನಿನಲ್ಲಿ ಸುಸಜ್ಜಿತ, ಸುಂದರವಾದ ಮುಖ್ಯ ಕಟ್ಟಡ ಹಾಗು ಮಹಿಳಾ ವಸತಿ ನಿಲಯಗಳೊಂದಿಗೆ ವಿಶಾಲವಾದ ಆವರಣವನ್ನು ಹಾಗೂ ಆಟದ ಮೈದಾನವನ್ನು ಹೊಂದಿದೆ.

ನಾಲ್ಕು ದಶಕಗಳ ಅಸ್ತಿತ್ವದ ಅವಧಿಯಲ್ಲಿ ಮಹಾವಿದ್ಯಾಲಯದಿಂದ ಅಸಂಖ್ಯಾತ ವಿಶಿಷ್ಟ ಪದವಿಧರರು ಹೊರಹೊಮ್ಮಿದ್ದಾರೆ. ಅವರು ಆಡಳಿತಗಾರರು, ಶಿಕ್ಷಕರು, ಪ್ರಾಧ್ಯಾಪಕರು, ಪ್ರಾಚಾರ್ಯರು, ಕ್ರೀಡಾಪಟುಗಳು, ವ್ಯಾಪಾರಿಗಳು, ಉದ್ಯಮಿಗಳು, ಪ್ರತಿಷ್ಠಿತ ಖಾಸಗಿ, ಸಾರ್ವಜನಿಕ ಸಂಸ್ಥೆಗಳಲ್ಲಿ ಪ್ರಮುಖ ಹುದ್ದೆಗಳನ್ನು ಅಲಂಕರಿಸುವದರೊಂದಿಗೆ ಜೀವನದ ಯಶಸ್ಸನ್ನು ಸಾಧಿಸಿರುವುದು ನಮಗೆ ನಿಜವಾಗಿಯೂ ಹೆಮ್ಮೆಯ ಸಂಗತಿ.

ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯವು ಕಳೆದವರ್ಷ 495 ವಿದ್ಯಾರ್ಥಿಗಳ ಹೆಸರುಗಳನ್ನು ದಾಖಲಿಸಿಕೊಂಡಿದ್ದು, ಆ ವಿದ್ಯಾರ್ಥಿಗಳು ಕೆಳಕಂಡ ಕೋರ್ಸಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ.

1) ಕಲೆ –(ಬಿ.ಎ.1 ರಿಂದ 6ನೇ ಸೆಮೆಸ್ಟರ)

2) ವಾಣಿಜ್ಯ_(ಬಿ.ಕಾಂ.1 ರಿಂದ 6ನೇ ಸೆಮೆಸ್ಟರ)

# ಕೋರ್ಸುಗಳ ವಿವರ

## ಕಲಾ ವಿಭಾಗದ 3 ವರ್ಷ(6 ಸೆಮೆಸ್ಟರ)ದ ಪದವಿ ಕೋರ್ಸು

(ರಾಣಿಚೆನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿಯಿಂದ ಸಂಯೋಜಿತ)

**ಬಿ.ಎ.1 ನೆ ಸೆಮೆಸ್ಟರ ಅವಶ್ಯ ಪತ್ರಿಕೆ**
1) ಇಂಗ್ಲಿಷ
2) ಕನ್ನಡ
3) ಹಿಂದಿ ಬೇಕಾದ ಎರಡು

3ಮತ್ತು5 ನೆ ಸೆಮೆಸ್ಟರಗೆ 1ನೇ ಸೆಮೆಸ್ಟರನಲ್ಲಿ ಆಯ್ದುಕೊಂಡ ವಿಷಯಗಳೇ ಮುಂದುವರೆಯುತ್ತವೆ.

## ಐಚ್ಛಿಕ ಪತ್ರಿಕೆ

ಕೆಳಗಿನವುಗಳಲ್ಲಿ ಬೇಕಾದ ಒಂದು ವಿಷಯಗಳ ಗುಂಪನ್ನು ಆಯ್ಕೆ ಮಾಡಿಕೊಳ್ಳುವುದು.

| ಅ.ನಂ. | ವಿಷಯಗಳು | |
|---|---|---|
| 01. | ಕನ್ನಡ – ರಾಜ್ಯಶಾಸ್ತ್ರ | kannada -Political science |
| 02. | ಕನ್ನಡ – ಅರ್ಥಶಾಸ್ತ್ರ | kannada -Economics |
| 03. | ಸಮಾಜಶಾಸ್ತ್ರ – ರಾಜ್ಯಶಾಸ್ತ್ರ | Sociology-Political science |
| 04. | ಕನ್ನಡ – ಇತಿಹಾಸ | Kannada-history |
| 05. | ಸಮಾಜಶಾಸ್ತ್ರ – ಅರ್ಥಶಾಸ್ತ್ರ | Sociology- Economics |
| 06. | ಅನ್ವಯಿಕ ಸಂಖ್ಯಾಶಾಸ್ತ್ರ – ರಾಜ್ಯಶಾಸ್ತ್ರ | Applied statistics-Political science |
| 07. | ಸಮಾಜಶಾಸ್ತ್ರ – ಇತಿಹಾಸ | Sociology -history |
| 08. | ಅನ್ವಯಿಕ ಸಂಖ್ಯಾಶಾಸ್ತ್ರ – ಅರ್ಥಶಾಸ್ತ್ರ | Applied statistics- Economics |
| 09. | ಅನ್ವಯಿಕ ಸಂಖ್ಯಾಶಾಸ್ತ್ರ – ಇತಿಹಾಸ | Applied statistics- history |
| 10. | ಹಿಂದಿ – ಅರ್ಥಶಾಸ್ತ್ರ | Hindi- Economics |
| 11. | ಹಿಂದಿ – ರಾಜ್ಯಶಾಸ್ತ್ರ | Hindi- Political science |
| 12. | ಹಿಂದಿ – ಇತಿಹಾಸ | Hindi- history |
| 13. | ಇತಿಹಾಸ – ಅರ್ಥಶಾಸ್ತ್ರ | History- Economics |
| 14. | ಇತಿಹಾಸ – ರಾಜ್ಯಶಾಸ್ತ್ರ | history -Political science |
| 15. | OEC | |

# ವಾಣಿಜ್ಯ ವಿಭಾಗದ ೩ ವರ್ಷ (೬ ಸೆಮೆಸ್ಟರ) ದ ಪದವಿ ಕೋರ್ಸ
(ರಾಣಿಚೆನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿಯಿಂದ ಸಂಯೋಜಿತ)

## ಬಿ.ಕಾಂ. 1 ನೇ ಸೆಮೆಸ್ಟರನ ಅವಶ್ಯಕ ಪತ್ರಿಕೆಗಳು

1) ಕನ್ನಡ – Kannada
2) ಇಂಗ್ಲೀಷ – English
3) ಹಣಕಾಸು ಲೆಕ್ಕ ಪತ್ರ ನಿರ್ವಹಣೆ – Financial accounting
4) ನಿರ್ವಹಣೆಯ ಮೂಲತತ್ವಗಳ ಅನ್ವಯಿಕೆ – Management Principles and Applications
5) ಮಾರಾಟಗಾರಿಕೆಯ ಮೂಲತತ್ವಗಳು – Principles of Marketing
6) ಉದ್ಯಮಶೀಲತೆಯ ಅಭಿವೃದ್ಧಿ (OEC) - Entreprenevrship Development
7) ಡಿಜಿಟಲ್ ನಿರರ್ಗಳತೆ – Digital Fluency
8) H&W, YRC, NSS, R&R, SCOUTS AND GUIDES

## ಬಿ.ಕಾಂ. 2 ನೇ ಸೆಮೆಸ್ಟರನ ಅವಶ್ಯಕ ಪತ್ರಿಕೆಗಳು

1) ಕನ್ನಡ – Kannada
2) ಇಂಗ್ಲೀಷ – English
3) ಕಂಪನಿಯ ಆಡಳಿತ – Corporate Administration
4) ಬ್ಯಾಂಕಿಂಗ ಕಾನೂನು ಮತ್ತು ಆಚರಣೆಗಳು – Law and Practice of Banking
5) ಷೇರು ಮಾರುಕಟ್ಟೆಯಲ್ಲಿ ಹೂಡಿಕೆ (OEC) - Investment in Stock Exchange
6) ಪರಿಸರ ಅಧ್ಯಯನ – Environmental Studies
7) ಸುಧಾರಿತ ಹಣಕಾಸು ಲೆಕ್ಕಪತ್ರ ನಿರ್ವಹನೆ – Advanced Financial Accounting
8) H&W, YRC, NSS, R&R, SCOUTS AND GUIDES

## ವಾಣಿಜ್ಯ ವಿಭಾಗದ ೩ ವರ್ಷ (೬ ಸೆಮೆಸ್ಟರ) ದ ಪದವಿ ಕೋರ್ಸು

(ರಾಣಿಚೆನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿಯಿಂದ ಸಂಯೋಜಿತ)

### ಬಿ.ಕಾಂ. 3 ನೇ ಸೆಮೆಸ್ಟರನ ಅವಶ್ಯಕ ಪತ್ರಿಕೆಗಳು

1) ಕನ್ನಡ – **Kannada**
2) ಇಂಗ್ಲೀಷ – **English**
3) ಕಂಪನಿ ಲೆಕ್ಕ ಪತ್ರ ನಿರ್ವಹಣೆ – **Corporate Accounting**
4) ವೆಚ್ಚ ಲೆಕ್ಕ ಪತ್ರ ನಿರ್ವಹಣೆ – **Cost Accounting**
5) ಹಣಕಾಸು ಶಿಕ್ಷಣ ಮತ್ತು ಹೂಡಿಕೆ ಜಾಗೃತಿ

   **Financial Education and Investment Awareness**
6) ಜಾಹಿರಾತು ಕೌಶಲ್ಯಗಳು/ಉದ್ಯಮಶೀಲತೆಯ ಅಭಿವೃದ್ಧಿ (OEC)

   **Advertising Skills /Entrepreneurship Development**
7) ವ್ಯವಹಾರದ ಸಂಖ್ಯಾಶಾಸ್ತ್ರ – **Business Statistic**
8) Sports NCC, NSS, R&R Culture

### ಬಿ.ಕಾಂ. 4 ಸೆಮೆಸ್ಟರನ ಅವಶ್ಯಕ ಪತ್ರಿಕೆಗಳು

1) ಕನ್ನಡ – **Kannada**
2) ಇಂಗ್ಲೀಷ – **English**
3) ಸುಧಾರಿತ ಕಂಪನಿ ಲೆಕ್ಕಪತ್ರ ನಿರ್ವಹಣೆ – **Advanced Corporate Accounting**
4) ವೆಚ್ಚದ ವಿಧಾನಗಳು ಮತ್ತು ತಂತ್ರಗಳು – **Costing Methods and Techniques**
5) ವ್ಯಾಪಾರ ನಿಯಂತ್ರಣದ ಚೌಕಟ್ಟು – **Business Regulating and Frame Work**
6) ಭಾರತದ ಸಂವಿಧಾನ – **Constitution of India**
7) ಕೃತಕ ಬುದ್ಧಿ ಮತ್ತೆ – **Artificial Intelligence**
8) **Sports NCC, YRC NSS** ಇತರೆ

# ವಾಣಿಜ್ಯ ವಿಭಾಗದ ೩ ವರ್ಷ (೬ ಸೆಮೆಸ್ಟರ) ದ ಪದವಿ ಕೋರ್ಸು

(ರಾಣಿಚೆನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿಯಿಂದ ಸಂಯೋಜಿತ)

## ಬಿ.ಕಾಂ. 5 ನೇ ಸೆಮೆಸ್ಟರನ ಅವಶ್ಯಕ ಪತ್ರಿಕೆಗಳು

1) ನಿರ್ವಹಣೆಯ ಲೆಕ್ಕಶಾಸ್ತ್ರ – **Management Accounting**
2) ಆದಾಯ ತೆರಿಗೆ–1 – **Income Tax 1**
3) ವೆಚ್ಚ ಲೆಕ್ಕಶಾಸ್ತ್ರ–1 – **Cost Accounting 1**
4) ಭಾರತೀಯ ಲೆಕ್ಕ ಪತ್ರ ನಿರ್ವಹಣೆಯ ಮಾನದಂಡಗಳು – **Indian Accounting Standard**
5) ವಿದ್ಯುನ್ಮಾನ ಲೆಕ್ಕ ಪತ್ರ ನಿರ್ವಹಣೆ – **E accounting**
6) ಸಮುದಾಯ ಸೇವೆಗಳು – **Community Services**
7) ಗ್ರಾಮೀಣ ಮಾರುಕಟ್ಟೆಯ ಮೂಲತತ್ವಗಳು – **Fundamental of Rural Marketing**
8) ಜಾಹೀರಾತು ಮತ್ತು ಮಾರಾಟಗಾರಿಕೆ – **Advertising and Salesmanship**

## ಬಿ.ಕಾಂ. 6 ನೇ ಸೆಮೆಸ್ಟರನ ಅವಶ್ಯಕ ಪತ್ರಿಕೆಗಳು

1) ಲೆಕ್ಕ ಪರಿಶೋಧನೆಯ ಆಚರಣೆ ಮತ್ತು ತತ್ವಗಳು – **Principles of Auditing**
2) ಆದಾಯ ತೆರಿಗೆ–2 – **Income tax 2**
3) ವೆಚ್ಚದ ವಿಧಾನಗಳು – **Costing Methods and Techniques**
4) ಭಾರತೀಯ ಹಣಕಾಸು ಸಂಸ್ಥೆಗಳು ಮತ್ತು ಮಾರುಕಟ್ಟೆಗಳು – **Indian Financial Institutions**
5) ಸೇವೆಗಳ ಮಾರಾಟ ಪ್ರಕ್ರಿಯೆ – **Service Marketing**
6) ಗ್ರಾಹಕರ ವರ್ತನೆ ಮತ್ತು ಮಾರುಕಟ್ಟೆ ಸಂಶೋಧನೆ

   **Consumer behavior and market research**
7) ಕಂಪನಿಯ ಸಂಪನ್ಮೂಲ ಯೋಜನೆ – **Enterprise resource planning**
8) ತರಬೇತಿ ಅವಧಿಯ ಯೋಜನೆ – **Internship Programme**

## ಆಂತರಿಕ ಮೌಲ್ಯಮಾಪನ :

ಪ್ರತಿ ವಿಷಯದಲ್ಲಿ ರಾ.ಚ.ವಿ. ಎನ್.ಇ.ಪಿ ನಿಯಮದಂತೆ 40 ಅಂಕಗಳನ್ನು ಈ ಕೆಳಗಿನಂತೆ ನೀಡಲಾಗುವುದು.

| | | | |
|---|---|---|---|
| ಅ) | ಪ್ರಥಮ ಕಿರು ಪರೀಕ್ಷೆ | – | 10 ಅಂಕಗಳು |
| ಬ) | ದ್ವಿತೀಯ ಕಿರು ಪರೀಕ್ಷೆ | – | 10 ಅಂಕಗಳು |
| ಕ) | ಮನೆ ಬರವಣಿಗೆ | – | 10 ಅಂಕಗಳು |
| ಡ) | ಹಾಜರಾತಿ ಮತ್ತು ಇತರೆ | – | 10 ಅಂಕಗಳು |

## ಪ್ರವೇಶದ ನಿಯಮಗಳು

ಮಹಾವಿದ್ಯಾಲಯದಲ್ಲಿ ಪ್ರವೇಶ ಪಡೆಯ ಬಯಸುವ ವಿದ್ಯಾರ್ಥಿಗಳು ಕೆಳಕಂಡ ದಾಖಲಾತಿಗಳನ್ನು ಲಗತ್ತಿಸಿದ ನಿಗದಿತ ಅರ್ಜಿಯನ್ನು ಸಲ್ಲಿಸಬೇಕು.

1) ಅರ್ಹತಾ ಪರೀಕ್ಷೆ ಪಾಸು ಮಾಡಿದ ಮೂಲ ಅಂಕಪಟ್ಟಿ

2) ಶಾಲೆ ಬಿಟ್ಟ/ವರ್ಗಾವಣೆಯ ಮೂಲ ಪ್ರಮಾಣ ಪತ್ರ (1ನೆ ಸೆಮೆಸ್ಟರಗೆ ಮಾತ್ರ)

3) ಆದಾಯ ಮತ್ತು ಜಾತಿ ಪ್ರಮಾಣ ಪತ್ರ

4) ಮೇಲ್ಕಾಣಿಸಿದ ದಾಖಲೆಗಳ ತಲಾ 3 ನೆರಳಚ್ಚು (ಝರಾಕ್ಷ) ಪ್ರತಿಗಳು

5) ನಾಲ್ಕು ಐಡೆಂಟಿಟಿ ಅಳತೆಯ ಇತ್ತೀಚಿನ ಭಾವ ಚಿತ್ರಗಳು

ಪ್ರವೇಶ ಪಡೆದ ನಂತರ ಸಾಮಾನ್ಯವಾಗಿ ನಿಕಾಯ(ಫ್ಯಾಕಲ್ಟಿ)ದ ಬದಲಾವಣೆಗೆ ಅವಕಾಶವಿರುವುದಿಲ್ಲ.

## ಪ್ರವೇಶ ಅರ್ಹತೆ

1) ಬಿ.ಎ./ಬಿ.ಕಾಂ 1ನೇ ಸೆಮೆಸ್ಟರನ ಪ್ರವೇಶಕ್ಕೆ ವಿದ್ಯಾರ್ಥಿಯು ಪಿ.ಯು.ಸಿ. 2ನೇ ವರ್ಷದ ಪರೀಕ್ಷೆಯನ್ನು ಉತ್ತೀರ್ಣನಾಗಿರಬೇಕು ಅಥವಾ ಬೆಳಗಾವಿಯ ರಾಣಿಚನ್ನಮ್ಮಾ ವಿಶ್ವವಿದ್ಯಾಲಯವು ಮಾನ್ಯ ಮಾಡುವ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕು

2) ಬಿ.ಎ./ಬಿ.ಕಾಂ 3ನೇ ಮತ್ತು 5ನೇ ಸೆಮೆಸ್ಟರಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ರಾಣಿಚನ್ನಮ್ಮಾ ವಿಶ್ವವಿದ್ಯಾಲಯದ ನಿಯಮಾನುಸಾರ ಪ್ರಯೋಜನ ಪಡೆಯುವರು.

# ನಿಯಮಗಳು

ಪ್ರತಿಯೊಬ್ಬ ವಿದ್ಯಾರ್ಥಿಯು ಈ ಕೆಳಗಿನ ನಿಯಮಗಳಿಗೆ ಬದ್ಧನಾಗಿರಬೇಕು

1) ವಿದ್ಯಾರ್ಥಿಯಲ್ಲಿ ಆಕ್ಷೇಪಾರ್ಹ ವರ್ತನೆ ಕಂಡುಬಂದಲ್ಲಿ ಆತನ ಪ್ರವೇಶವನ್ನು ತಿರಸ್ಕರಿಸುವ ಹಕ್ಕು ಪ್ರಾಚಾರ್ಯರಿಗಿರುತ್ತದೆ.

2) ವಿದ್ಯಾರ್ಥಿಯಲ್ಲಿ ಆಕ್ಷೇಪಾರ್ಹ ವರ್ತನೆ ಕಂಡುಬಂದರೆ ವಿದ್ಯಾರ್ಥಿಯನ್ನು ಮಹಾವಿದ್ಯಾಲಯದಿಂದ ಪ್ರಾಚಾರ್ಯರು ಹೊರಹಾಕುತ್ತಾರೆ.

3) ವಿದ್ಯಾರ್ಥಿಯ ಹಾಜರಾತಿಯು ಕಡ್ಡಾಯವಾಗಿರುತ್ತದೆ. ವಿದ್ಯಾರ್ಥಿಯ ವರ್ಗಗಳ ಹಾಜರಾತಿ 75% ಕಿಂತ ಕಡಿಮೆ ಇದ್ದಲ್ಲಿ ಅವನು ಪರೀಕ್ಷೆಗೆ ಹಾಜರಾಗಲು ಅನರ್ಹನಾಗುತ್ತಾನೆ.

4) ವರ್ಗಗಳು ನಡೆದ ವೇಳೆಯಲ್ಲಿ ಯಾವುದೇ ವಿದ್ಯಾರ್ಥಿಯು ಮೊಗಸಾಲೆ(ವರಾಂಡ)ಯಲ್ಲಿ ನಿಲ್ಲುವ ಇಲ್ಲವೆ ಅಲೆದಾಡುವಹಾಗಿಲ್ಲ. ಯಾರಾದರೂ ತಮ್ಮದಲ್ಲದ ವರ್ಗಕ್ಕೆ ಹೋಗುವ ಹಾಗೂ ಕೂಡುವ ಹಾಗಿಲ್ಲ.

5) ವಿದ್ಯಾರ್ಥಿಗಳು ಮಹಾವಿದ್ಯಾಲಯದ ನಿಯಮಾನುಸಾರ(ಅನುಗುಣ) ಒಳ್ಳೆಯ ಸಮವಸ್ತ್ರ ಧರಿಸಬೇಕು.

6) ವಿದ್ಯಾರ್ಥಿಗಳು ಗೋಡೆ, ಬೆಂಚುಗಳ ಮೇಲೆ ಬರೆಯುವುದು ಹಾಗೂ ಅಂದಗೆಡಿಸುವವರನ್ನು ನಿಷೇಧಿಸಿದೆ.

7) ಯಾವುದೇ ವಿದ್ಯಾರ್ಥಿಯು ಮಹಾವಿದ್ಯಾಲಯದ ಒಳಗಾಗಲಿ, ಹೊರಗಾಗಲಿ ಪ್ರಾಧ್ಯಾಪಕರೊಂದಿಗೆ, ಸಿಬ್ಬಂದಿಯೊಂದಿಗೆ, ವಿದ್ಯಾರ್ಥಿಗಳೊಂದಿಗೆ, ಪಾಲಕರೊಂದಿಗೆ ಅನುಚಿತವಾಗಿ ವರ್ತಿಸಬಾರದು.

8) ಯಾವುದೇ ವಿದ್ಯಾರ್ಥಿಯು ಮಹಾವಿದ್ಯಾಲಯದಲ್ಲಿ ಗುಟಕಾ, ಪಾನ, ಅಂಟುಮಿಠಾಯಿ (ಚುಯಿಂಗಮ್) ಅಗಿಯುವದು, ಮಾದಕ ವಸ್ತುಗಳ ಸೇವನೆ, ಧೂಮಪಾನ ಮಾಡುವುದನ್ನು ಕಟ್ಟುನಿಟ್ಟಾಗಿ ನಿಷೇದಿಸಲಾಗಿದೆ.

9) ಮಹಾವಿದ್ಯಾಲದಲ್ಲಿ ಸಹಜವಾಗಿ ಯಾವುದೇ ಕಾರ್ಯಕ್ರಮವನ್ನು ನಡೆಸುವ, ಅನುಮತಿ ಕೊಡುವ, ರದ್ದು ಪಡೆಸುವ ಅಧಿಕಾರವನ್ನು ಪ್ರಾಚಾರ್ಯರು ಹೊಂದಿರುತ್ತಾರೆ.

10) ಕರ್ನಾಟಕ ಶಿಕ್ಷಣ ಕಾಯ್ದೆ 1983 ಕಲಂ 116 ರ ಪ್ರಕಾರ ವಿದ್ಯಾರ್ಥಿಗಳ ಕುಚೇಷ್ಠೆ(ರ್‍ಯಾಗಿಂಗ)ಯು ಶಿಕ್ಷಾರ್ಹ ಅಪರಾದ. ಮಹಾವಿದ್ಯಾಲಯದಲ್ಲಿ ಕುಚೇಷ್ಠೆ(ರ್‍ಯಾಗಿಂಗ)ಯನ್ನು ಕಟ್ಟುನಿಟ್ಟಾಗಿ ನಿಷೇಧಿಸಿದೆ.

11) ಒಂದು ಸಲ ಪಾವತಿಯಾದ ಶುಲ್ಕ ಮರುಪಾವತಿಯಾಗುವುದಿಲ್ಲ. ಪ್ರವೇಶ ರದ್ದಾದಲ್ಲಿ ಎಲ್ಲ ಶುಲ್ಕಗಳು ವಿಶ್ವವಿದ್ಯಾಲಯದ ಕಾನೂನಿನ ಪ್ರಕಾರ ಮುಟ್ಟುಗೋಲಾಗುತ್ತವೆ.

12) ಹಾಜರಿಸಂಖ್ಯೆ ಮತ್ತು ವಿಭಾಗ (ರೋಲ್ ನಂಬರ ಮತ್ತು ಡಿವಿಜನ್) ಗಳನ್ನು ಪ್ರವೇಶದ ವೇಳೆಯಲ್ಲಿ ಹಂಚಿಕೆ ಮಾಡಲಾಗುವದು. ಸಾಮಾನ್ಯವಾಗಿ ವಿಭಾಗ ಮತ್ತು ವಿಷಯಗಳ ಬದಲಾವಣೆಗೆ ನಂತರ ಅವಕಾಶವಿರುವುದಿಲ್ಲ.

13) ಸರಕಾರ ಮತ್ತು ವಿಶ್ವವಿದ್ಯಾಲಯಗಳ ಶುಲ್ಕಗಳು ಏರಿಕೆಯಾದಲ್ಲಿ ಅದನ್ನು ವಿದ್ಯಾರ್ಥಿಗಳು ಭರಿಸಬೇಕಾಗುತ್ತದೆ.

14) ಮಹಾವಿದ್ಯಾಲಯಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳ ಚರ್ಚೆ ಮೊದಲಾದವುಗಳಲ್ಲಿ ಪ್ರಾಚಾರ್ಯರ ತಿರ್ಮಾನವೇ ಅಂತಿಮ ಮತ್ತು ಬದ್ಧವಾಗಿರುತ್ತದೆ.

15) ವಿದ್ಯಾರ್ಥಿಗಳ ಶಿಸ್ತು, ಸಂಯಮ ಹಾಗೂ ಸಂಸ್ಕಾರಯುತ ವರ್ತನೆಗೆ ಹೆಚ್ಚಿನ ಮಹತ್ವ ಕೊಡಲಾಗುವದು

# ಸಿಬ್ಬಂದಿ ವರ್ಗ

ಬೇರೆ ಬೇರೆ ವಿಷಯಗಳನ್ನು ಬೋಧಿಸಲು ಮಹಾವಿದ್ಯಾಲಯವು ವಿಶೇಷ ಅರ್ಹತೆಯನ್ನು ಪಡೆದ ಅನುಭವಿ ಪ್ರಾಧ್ಯಾಪಕರನ್ನು ಹೊಂದಿದೆ. ನಮ್ಮ ಸಿಬ್ಬಂದಿಯು ರಚನಾತ್ಮಕತೆ ಮತ್ತು ನವೀನತೆಯನ್ನು ಅಳವಡಿಸಿಕೊಂಡಿದೆ. ಬೋಧನಾ ವೃತ್ತಿಯಲ್ಲಿ ಪ್ರಾಮಾಣಿಕತೆಗೆ ಹೆಸರಾದವರು. ಅವರು ವಿದ್ಯಾರ್ಥಿಗಳ ವಿದ್ಯಾಭ್ಯಾಸ ಹಾಗೂ ವೈಯಕ್ತಿಕ ಉತ್ಕೃಷ್ಟ ಸಾಧನೆಗೆ ಉತ್ಸಾಹ ಭರಿತ ಆಸಕ್ತಿಯೊಂದಿಗೆ ಮಾರ್ಗದರ್ಶನ ಮಾಡುವ ನೈಪುಣ್ಯತೆ ಹೊಂದಿದವರಾಗಿದ್ದಾರೆ. ನುರಿತ ಹಾಗೂ ಸೇವಾ ಮನೊಭಾವದ ಬೋದಕೇತರ ಸಿಬ್ಬಂದಿ ಮಹಾವಿದ್ಯಾಲಯದ ಪ್ರಗತಿಗಾಗಿ ಕಾರ್ಯನಿರತರಾಗಿದ್ದಾರೆ.

## ಹಿಂದಿ ವಿಭಾಗ



**ಡಾ. ಎ. ವ್ಹಿ. ಸೂರ್ಯವಂಶಿ**
ಪ್ರಾಚಾರ್ಯರು



**ಪ್ರೊ. ಎಸ್. ಜೆ. ಸೂರ್ಯವಂಶಿ**
ಹಿಂದಿ ವಿಭಾಗದ ಮುಖ್ಯಸ್ಥರು

## ಕನ್ನಡ ವಿಭಾಗ



**ಪ್ರೊ. ದೀಪಾ ಲಗಳಿ**
ಸಹಾಯಕ ಪ್ರಾದ್ಯಾಪಕರು
ಕನ್ನಡ ವಿಭಾಗದ ಮುಖ್ಯಸ್ಥರು



**ಪ್ರೊ. ಮಂಜುನಾಥ ಯಾದವ**
ಉಪನ್ಯಾಸಕರು

## ಇಂಗ್ಲೀಷ್ ವಿಭಾಗ



**ಪ್ರೊ. ಎಸ್. ಪಿ. ಕೋಟಿ**
ಇಂಗ್ಲೀಷ್ ವಿಭಾಗದ ಮುಖ್ಯಸ್ಥರು

## ಅರ್ಥಶಾಸ್ತ್ರ ವಿಭಾಗ



**ಡಾ. ರವೀಂದ್ರಗೌಡ. ಕೆ.**
ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರು



**ಪ್ರೊ. ಎಮ್. ಆರ್. ಮಮದಾಪೂರ**
ಉಪನ್ಯಾಸಕರು

## ಇತಿಹಾಸ ವಿಭಾಗ



**ಡಾ. ಎಸ್. ಬಿ. ಜನಗೊಂಡ**
ಇತಿಹಾಸ ವಿಭಾಗದ ಮುಖ್ಯಸ್ಥರು

## ಸಮಾಜಶಾಸ್ತ್ರ ವಿಭಾಗ



**ಡಾ. ಯಲ್ಲಪ್ಪ ನಾಯಕ**
ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರು

## ರಾಜ್ಯಶಾಸ್ತ್ರ ವಿಭಾಗ



**ಪ್ರೊ. ಡಿ. ಎನ್. ಕೊಣನತಲಿ**
ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು

## ಸಂಖ್ಯಾಶಾಸ್ತ್ರ ವಿಭಾಗ



**ಪ್ರೊ. ಪಿ. ಎಸ್. ಹೊರಕೇರಿ**
ಸಂಖ್ಯಾಶಾಸ್ತ್ರ ವಿಭಾಗದ ಮುಖ್ಯಸ್ಥರು

## ಗಣಕ ಯಂತ್ರ ವಿಭಾಗ



**ಪ್ರೊ. ರೇಖಾ ರಾಠೋಡ**
ಗಣಕ ಯಂತ್ರ ವಿಭಾಗದ ಮುಖ್ಯಸ್ಥರು

## ದೈಹಿಕ ಶಿಕ್ಷಣ ವಿಭಾಗ



**ಪ್ರೊ. ವಿಜಯ ರಜಪೂತ**
ದೈಹಿಕ ಶಿಕ್ಷಣದ ನಿರ್ದೇಶಕರು

## ವಾಣಿಜ್ಯ ವಿಭಾಗ



**ಪ್ರೊ. ಸಿ. ಪಿ. ದಡೇಕರ**
ವಾಣಿಜ್ಯ ವಿಭಾಗದ ಮುಖ್ಯಸ್ಥರು



**ಪ್ರೊ. ಬಿ. ಆರ್. ಮ್ಯಾಗೇರಿ**
ಉಪನ್ಯಾಸಕರು



**ಪ್ರೊ. ಎಸ್. ಡಿ. ಹಣಮರಡ್ಡಿ**
ಉಪನ್ಯಾಸಕರು

## ಬೋಧಕೇತರ ಸಿಬ್ಬಂದಿ




**ಶ್ರೀ ಎಸ್. ಜಿ. ಪಾಟೀಲ**
ಕಛೇರಿ ಅಧೀಕ್ಷಕರು



**ಶ್ರೀಮತಿ ಎಸ್ ಎಸ್ ರಾಥೋಡ**
ಪರೀಕ್ಷೆ ವಿಭಾಗ



**ಶ್ರೀಮತಿ ಜಿ ಜಿ ಪುಜಾರಿ**
ಶಿಷ್ಯ ವೇತನ ವಿಭಾಗ



**ಶ್ರೀ ಭೀಮಣ್ಣ ಸಿಂಧೆ**
ಗಣಕಯಂತ್ರ ವಿಭಾಗ



**ಶ್ರೀಮತಿ ಶಕುಂತಲಾ ಸಿಂಧೆ**
ಲೆಕ್ಕಿಗೆ



**ಶ್ರೀಮತಿ ರೇಣುಕಾ ಡೇನಾನವರ**
ಗ್ರಂಥಾಲಯ ವಿಭಾಗ



**ಶ್ರೀಮತಿ ಜ್ಯೋತಿ ಗರಡಿಮನಿ**
ಗ್ರಂಥಪಾಲಕರು



**ಕು. ತ್ರಿವೇಣಿ ಮಣ್ಣೂರ**
ಮೇಲ್ವಿಚಾರಕಿಯರು ವಿದ್ಯಾರ್ಥಿನಿಯದ
ವಸತಿನಿಲಯ



**ಶ್ರೀ ಎಸ್ ಎಸ್ ಎಂಬತ್ನಾಳ**
ಕಾವಲುಗಾರರು



**ಶ್ರೀ ಎಮ್ ಸಿ ಕನಸೆ**
ಕಾವಲುಗಾರರು



**ಶ್ರೀ ಬಿ ಎಮ್ ಮಾದರ**
ಸಿಪಾಯಿ



**ಶ್ರೀ ಬಿ ಎನ್ ಮುದ್ದೇಬಿಹಾಳ**
ಸಿಪಾಯಿ



**ಶ್ರೀಮತಿ ಟಿ ಆರ್ ಗಜಕೋಶ**
ಮಹಿಳಾ ಸಿಪಾಯಿ

ಎಲ್ಲ ವಿಭಾಗಗಳ ಮುಖ್ಯಸ್ಥರು ಹಾಗೂ ಸಿಬ್ಬಂದಿಯವರು ನಿಯಮಿತವಾಗಿ ಸಭೆ ಸೇರಿ ವರ್ಗಗಳ ಕಾರ್ಯಚಟುವಟಿಕೆಗಳ ಆಡಳಿತ ಮತ್ತು ಸಾಮಾನ್ಯ ಸಮಸ್ಯೆಗಳ ಕುರಿತು ಚರ್ಚಿಸುತ್ತಾರೆ. ರಚನಾತ್ಮಕ ತೀರ್ಮಾನಗಳನ್ನು ಕೈಕೊಂಡು ಅವುಗಳನ್ನು ಆಚರಣೆಗೆ ತಂದು ಮುಂದುವರಿಸಲಾಗುತ್ತದೆ. ನಿಯಮಿತವಾಗಿ ಕಛೇರಿ ಸಿಬ್ಬಂದಿಯು ಸಭೆ ಸೇರಿ ನಿರ್ವಹಣೆಯಲ್ಲಿ ಅವಶ್ಯವಾದ ಕ್ರಮಗಳನ್ನು ಕೈಕೊಳ್ಳಲಾಗುವುದು.

## ◈ ಪರೀಕ್ಷಾ ಪರಿಣಾಮ :

ಮಹಾವಿದ್ಯಾಲಯವು ಶೈಕ್ಷಣಿಕ ಮತ್ತು ಪಠ್ಯಪೂರಕ ಚಟುವಟಿಕೆಗಳಲ್ಲಿ ಉತ್ಕೃಷ್ಠತೆಯಲ್ಲಿ ಉನ್ನತ ಸ್ಥಾನವನ್ನು ಸ್ಥಾಪಿಸಿದೆ. ನಮ್ಮ ವಿದ್ಯಾರ್ಥಿಗಳ ಉತ್ತೀರ್ಣತೆಯ ಪ್ರಮಾಣವು ಯಾವಾಗಲೂ ರಾಣಿ ಚೆನ್ನಮ್ಮಾ ವಿಶ್ವವಿದ್ಯಾಲಯ ಪರೀಕ್ಷಾ ಪರಿಣಾಮದ ಶೇಕಡಾ ದರಕ್ಕಿಂತ ಹೆಚ್ಚಾಗಿರುತ್ತದೆ. ವಿದ್ಯಾರ್ಥಿಗಳ ಗುಣಮಟ್ಟದ ಶಿಕ್ಷಣ ಮತ್ತು ವ್ಯಕ್ತಿತ್ವ ವಿಕಾಸವೇ ನಮಗೆ ಪ್ರಧಾನವಾದದ್ದು.

## ◈ ತಾಂತ್ರಿಕ ಬೋಧನಾ ಸೌಕರ್ಯ :

ಮಹಾವಿದ್ಯಾಲಯದಲ್ಲಿ ಪಾರಂಪರಿಕ ಬೋದನಾ ಪದ್ಧತಿಯೊಂದಿಗೆ LCD,ICT,OHP ಹಾಗೂ ಸ್ಮಾರ್ಟ ಬೋರ್ಡಗಳ ಮೂಲಕವೂ ಬೋಧನಾಕಾರ್ಯ ನಡೆಯುತ್ತದೆ.

## ◈ ಕ್ರೀಡೆ :

ಮಹಾವಿದ್ಯಾಲಯದ ಆವರಣವು ಬೃಹತ್ ಕ್ರೀಡಾ ಮೈದಾನವನ್ನು ಹೊಂದಿದೆ. 200 ಮೀಟರಗಳ ಟ್ರ್ಯಾಕನೊಂದಿಗೆ ಈ ಮೈದಾನದಲ್ಲಿ ಖೊಖೊ, ವ್ಹಾಲಿಬಾಲ್, ಕಬಡ್ಡಿ, ಟೆನಿಕ್ವಾಯಿಟ ಅಂಕಣ (Court). ಲಾಂಗ ಜಂಪ್, ಹೈ ಜಂಪ್, ಡಿಸ್ಕಸ್ ಥ್ರೋ– ಜಾವಲಿನ್ ಥ್ರೋ, ಅಂಕಣಗಳಿವೆ.

◈ **ಮಲ್ಟಿ ಜಿಮ್ :**

ವಿದ್ಯಾರ್ಥಿಗಳ ಶಾರೀರಿಕ ವಿಕಾಸ, ದೇಹ ದ್ಯಾರ್ಢ್ಯತೆ ಆರೋಗ್ಯ ವೃದ್ಧಿಗೋಸ್ಕರ ಮಹಾವಿದ್ಯಾಲಯದಲ್ಲಿ ಸುಸಜ್ಜಿತ ವ್ಯಾಯಾಮಶಾಲೆ (Multi Gym)ಯನ್ನು ಸ್ಥಾಪಿಸಿದೆ. ವಿದ್ಯಾರ್ಥಿಗಳಲ್ಲಿ ಕ್ರೀಡಾಮನೋಭಾವವನ್ನು ಮಹಾವಿದ್ಯಾಲಯವು ಪ್ರೊತ್ಸಾಹಿಸುತ್ತದೆ. ಕ್ರೀಡೆಯಲ್ಲಿ ಮಹಾವಿದ್ಯಾಲಯವು ಹಲವಾರು ಟ್ರೊಫಿ ಮತ್ತು ಶೀಲ್ದುಗಳನ್ನು ಗೆದ್ದಿದೆ. ಕ್ರೀಡಾಪಟುಗಳಿಗೆ ಉದಾರ ನೆರವು ನೀಡಲಾಗುತ್ತದೆ. ಸಂಪನ್ಮೂಲದ ಲಭ್ಯತೆ ಹಾಗೂ ಆದ್ಯತೆಯ ಆಧಾರದ ಮೇಲೆ ವಿಶೇಷ ಕ್ರೀಡಾಪಟುಗಳಿಗೆ ಕಿಟ್ ಮತ್ತು ಆಹಾರಕ್ರಮದ ಭತ್ಯೆ ಮೊದಲಾದವುಗಳನ್ನು ಕೊಡಲಾಗುತ್ತದೆ.

◈ **ರಾಷ್ಟ್ರೀಯ ಸೇವಾ ಯೋಜನೆ (NSS) :**

ಮಹಾವಿದ್ಯಾಲಯವು 100 ಸ್ವಯಂ ಸೇವಕರ ರಾಷ್ಟ್ರೀಯ ಸೇವಾ ಯೋಜನೆಯ ಒಂದು ಘಟಕವು ಹೊದಿದೆ. ಈ ಘಟಕದಿಂದ ಶೈಕ್ಷಣಿಕ, ಸಾಮಾಜಿಕ ಕಾರ್ಯಕ್ರಮಗಳ ಅಳವಡಿಕೆ, ಜಾಗ್ರತಿ, ಆಚರಣೆ, ವಿಶೇಷ ಶಿಬಿರ ಮೊದಲಾದವುಗಳನ್ನು ಆಯೋಜಿಸಲಾಗುತ್ತದೆ.

◈ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕವು ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ, ಜಾಗೃತ್ ಪ್ರಜ್ಞೆ, ಸಮಾಜ ಸೇವಾ ಮನೋಭಾವ ಬೆಳೆಸುತ್ತದೆ.

◈ ಯುವ ರೆಡ್ ಕ್ರಾಸ್ ಮೂಲಕ ರಕ್ತದಾನ ಶಿಬಿರ ನಡೆಸಲಾಗುತ್ತದೆ.

◈ ವಿಕಲಚೇತನರಿಗೆ ತ್ರಿಚಕ್ರ ವಾಹನ ವಿತರಿಸಲಾಗುತ್ತದೆ.

◈ **ಗ್ರಂಥಾಲಯ ಮತ್ತು ವಾಚನಾಲಯ :**

ನಮ್ಮ ಗ್ರಂಥಾಲಯವು ಕಲೆ ಮತ್ತು ವಾಣಿಜ್ಯ ನಿಕಾಯಗಳ, ಎಲ್ಲ ಶಾಖೆಗಳ ಗ್ರಂಥಗಳನ್ನ ಹೊಂದಿದೆ. ಗ್ರಂಥಾಲಯದ ಎಲ್ಲಾ ಸೌಲಭ್ಯಗಳನ್ನು ಪಡೆಯಲು ವಿದ್ಯಾರ್ಥಿಗಳಿಗೆ ತಿಳಿಯಪಡಿಸಲಾಗಿದೆ. ಅವರು ಶಾಂತತೆಯಿಂದ ಗ್ರಂಥಾಲಯದ ಎಲ್ಲ ನಿಯಮಗಳನ್ನು ಪಾಲಿಸಬೇಕು. ಯಾವುದೇ ವಿದ್ಯಾರ್ಥಿಯು ಶಾಂತಿಗೆ ಭಂಗಪಡಿಸಿದರೆ, ಗ್ರಂಥಗಳನ್ನು, ಪತ್ರಿಕೆಗಳನ್ನು, ನಿಯತಕಾಲಿಕೆಗಳನ್ನು ವಿರೂಪಗೊಳಿಸಿದರೆ, ಹರಿದರೆ, ಅಂಥವರನ್ನು ನಿರ್ದಾಕ್ಷಿಣ್ಯವಾಗಿ ದಂಡಿಸಲಾಗುವುದು. ಪರಿಚಯ ಚೀಟಿ (ಐಡೆಂಟಿಟಿ ಕಾರ್ಡ) ಯನ್ನು ಹೊಂದಿದವರಿಗೆ ಮಾತ್ರ ಗ್ರಂಥಾಲಯ ಮತ್ತು ವಾಚನಾಲಯಗಳಲ್ಲಿ ಪ್ರವೇಶವಿರುತ್ತದೆ.

◈ ಇ ಗ್ರಂಥಾಲಯ ವ್ಯವಸ್ಥೆ ಹೊಂದಿದೆ.

◈ **ಭಾಷಾ ಪ್ರಯೋಗಾಲಯ :**

ಮಹಾವಿದ್ಯಾಲಯವು ಸುಸಜ್ಜಿತ, ಆಧುನಿಕ ಭಾಷಾ ಪ್ರಯೋಗಾಲಯವನ್ನು ಹೊಂದಿದೆ. ಈ ಪ್ರಯೋಗಾಲಯದಿಂದ ವಿದ್ಯಾರ್ಥಿಗಳು ವಿವಿಧ ಭಾಷೆಗಳ ಮಾಹಿತಿ ಮತ್ತು ಜ್ಞಾನವನ್ನು ಪಡೆಯುವ ಸೌಲಭ್ಯವಿದೆ.

◈ **ಗಣಕಯಂತ್ರದ ಪ್ರಯೋಗಾಲಯ :**

ಮಹಾವಿದ್ಯಾಲಯವು ವಿಶಾಲ, ಸುಸಜ್ಜಿತವಾದ ಗಣಕಯಂತ್ರ ಪ್ರಯೋಗಾಲಯವನ್ನು ಹೊಂದಿದೆ. ಪ್ರಯೋಗಾಲಯದಲ್ಲಿ ಅಂತರ್ಜಾಲ ಮತ್ತು ಪೂರಕ ಸಾಮಗ್ರಿಗಳ ಸೌಲಭ್ಯವಿರುತ್ತದೆ.

◈ **ಮಹಿಳಾ ವಸತಿ ನಿಲಯ :**

ಮಹಾವಿದ್ಯಾಲಯವು ತನ್ನ ಆವರಣದಲ್ಲಿಯೇ 20 ಕೊಠಡಿಗಳ ಸುಸಜ್ಜಿತ ಮಹಿಳಾ ವಸತಿ ನಿಲಯವನ್ನು ಹೊಂದಿದೆ. ಇದರಲ್ಲಿ ಸುಮಾರು 40 ರಿಂದ 60 ವಿದ್ಯಾರ್ಥಿನಿಯರು ವಸತಿ ಪ್ರಯೋಜನವನ್ನು ಪಡೆಯುವ ವ್ಯವಸ್ಥೆ ಹೊಂದಿದೆ ಸಿ ಸಿ ಕ್ಯಾಮರಾ ಹಾಗೂ ಸೆಕ್ಯುರಿಟಿ ಗಾರ್ಡಗಳು ಮಹಿಳಾ ವಸತಿ ನಿಲಯದ ಸುರಕ್ಷತೆಗೆ ಇದ್ದಾರೆ

## ಸಮಿತಿಗಳು

ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಈ ಕೆಳಕಂಡ ಸಮಿತಿಗಳನ್ನು ರಚಿಸಲಾಗಿರುತ್ತದೆ.

1) ಪ್ರವೇಶ ಸಮಿತಿ
2) ಶಿಸ್ತು ಪಾಲನಾ ಸಮಿತಿ
3) ಕುಂದುಕೊರತೆ ನಿವಾರಣಾ ಸಮಿತಿ
4) ಪರೀಕ್ಷಾ ಸಮಿತಿ
5) ಪಾಲಕರ ಸಂಪರ್ಕ ಸಮಿತಿ
6) ವಿದ್ಯಾರ್ಥಿಗಳ ಹಾಜರಾತಿ ಸಮಿತಿ
7) ವಿದ್ಯಾರ್ಥಿಗಳ ಕ್ಷೇಮ ಪಾಲನಾ ಸಮಿತಿ
8) ಸಲಹೆಗಾರರ ಸಮಿತಿ
9) ಗ್ರಂಥಾಲಯ ಸಮಿತಿ
10) ಸಾಂಸ್ಕೃತಿಕ ಮತ್ತು ಚರ್ಚಾಕೂಟ ಸಮಿತಿ
11) ಮಹಿಳಾ ವೇದಿಕೆ
12) ಕ್ರೀಡಾ ಸಮಿತಿ
13) ವಿಚಾರ ಸಂಕೀರ್ಣ ಸಮಿತಿ
14) ಯೋಜನಾ ಸಮಿತಿ
15) ಲೈಂಗಿಕ ಕಿರುಕುಳ ನಿವಾರಣಾ ಸಮಿತಿ
16) ಗುಣಮಟ್ಟ ವೃತ್ತ

## ಹಳೆಯ ವಿದ್ಯಾರ್ಥಿಗಳ ಸಂಘ

ಮಹಾವಿದ್ಯಾಲಯದಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘವಿದೆ. ಪದವಿಪಡೆದು ಹೊರಹೋಗುವ ವಿದ್ಯಾರ್ಥಿಗಳು ಸದರಿ ಸಂಘಕ್ಕೆ ಸದಸ್ಯರಾಗಿ ನೊಂದಾಯಿಸಲು ಕೋರಲಾಗಿದೆ.
ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಹಲವು ಕಾರ್ಯಕ್ರಮಗಳನ್ನು ಪ್ರತಿ ವರ್ಷ ಆಯೋಜಿಸುವರು



**ಶ್ರೀ ಬಸವರಾಜ ಸಂ ನಾಯಕೋಡಿ**
ಅಧ್ಯಕ್ಷರು



**ಶ್ರೀ ಶಿವಾನಂದ ಜಿ ತೋಳನೂರ**
ಕಾರ್ಯದರ್ಶಿ



**ಶ್ರೀ ಮೌನೇಶ ವ್ರು ಪತ್ತಾರ**
ಉಪಾಧ್ಯಕ್ಷರು



**ಶ್ರೀ ಪೃಥ್ವಿರಾಜ ಶೇ ನಾಯ್ಕೋಡಿ**
ಉಪಾಧ್ಯಕ್ಷರು



**ಶ್ರೀ ಲಿಂಗರಾಜ ಶಂ ಡಂಬಳ**
ಖಜಾಂಚಿ



**ಶ್ರೀ ಬಸವರಾಜ ಸ ಗಚ್ಚಿನವರ**
ನಿರ್ದೇಶಕರು

**ಶ್ರೀ ರವಿ ಲಿಂ ತಿಪ್ಪನಗೌಡರ** – ನಿರ್ದೇಶಕರು
**ಶ್ರೀ ಪ್ರವೀಣ ಶಂ ಚಿಕ್ಕೋಂಡ** – ನಿರ್ದೇಶಕರು
**ಶ್ರೀ ಮಹೇಶ ಯ ಅವಟಿ** – ನಿರ್ದೇಶಕರು
**ಶ್ರೀ ಬಸವರಾಜ ಮ ಮಾದನಶೆಟ್ಟಿ** – ನಿರ್ದೇಶಕರು
**ಶ್ರೀಮತಿ ಶೋಭಾ ಬಾ ಪಾಟೀಲ** – ನಿರ್ದೇಶಕರು
**ಶ್ರೀಮತಿ ರೇಣುಕಾ ಸಾ ಹೇರಾನವರ** – ನಿರ್ದೇಶಕರು

**ಶ್ರೀ ಮಲ್ಲಿಕಾರ್ಜುನ ಬ ಅಂಬಳನೂರ**
ಕಾನೂನು ಸಲಹೆಗಾರರು

ಸಲಹೆಗಾರರು: **ಪ್ರಾಚಾರ್ಯರು ಶ್ರೀ ಬಿ ಎ ಸಿ ಸಿ ಬಾಗೇವಾಡಿ**

## ◈ ವೃತ್ತಿಪರ ಕಾರ್ಯಕ್ರಮ :

ಮಹಾವಿದ್ಯಾಲಯವು ಕಿರುಕುಳ ವ್ಯವಹಾರ ವೃತ್ತಿ ಪರ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ವಾಣಿಜ್ಯ ಮತ್ತು ಕಲಾ ನಿಕಾಯದ ವಿದ್ಯಾರ್ಥಿಗಳು ಪದವಿಯೊಂದಿಗೆ ಸರ್ಟಿಫಿಕೇಟ್, ಡಿಪ್ಲೊಮಾ, ಅಡ್ವಾನ್ಸಡ ಡಿಪ್ಲೊಮಾ ಕೋರ್ಸಗಳನ್ನು ಅಧ್ಯಯನ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ.

ಶ್ರೀ ಮಾತಾ ಅಕಾಡೆಮಿಯ ಸಹಯೊಗದೊಂದಿಗೆ ವಿದ್ಯಾರ್ಥಿಗಳಿಗೆ ವೃತ್ತಿಪರ ತರಗತಿಗಳನ್ನು ಮದ್ಯಾಹ್ನ 1:30 ರಿಂದ 5:30 ರವರೆಗೆ ಐ ಎ ಎಸ್, ಕೆ ಎ ಎಸ್, ಎಸ್ ಡಿ ಎ, ಎಫ್ ಡಿ ಎಸ್, ಪಿಡಿಒ ತರಬೇತಿ ನೀಡಲಾಗುತ್ತದೆ

## ◈ ಶಿಷ್ಯವೇತನಗಳು :

ಕೆಳಕಂಡ ಶಿಷ್ಯವೇತನ ಮತ್ತು ಪುರಸ್ಕಾರಗಳು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಹಾವಿದ್ಯಾಲಯದಿಂದ ಲಭ್ಯವಾಗುತ್ತವೆ.

1) ಭಾರತ ಸರಕಾರದ ಪ್ರತಿಭಾ ಶಿಷ್ಯವೇತನ
2) ಭಾರತ ಸರಕಾರದ ಮೆಟ್ರಿಕ್ ನಂತರ ಶಿಷ್ಯವೇತನ
3) ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಶಿಷ್ಯವೇತನ
4) ಭಾರತ ಸರಕಾರದ ಕನ್ನಡ ಮಾಧ್ಯಮ ಶಿಷ್ಯವೇತನ
5) ಮಾಜಿ ಸೈನಿಕ ಕಲ್ಯಾಣನಿಧಿ ಶಿಷ್ಯವೇತನ
6) ಭಾರತ ಸರಕಾರದ ಮೆಟ್ರಿಕ್ ನಂತರ ವಿಕಲಚೇತನರ ಶಿಷ್ಯವೇತನ
7) ಪುರಸಭೆ ಶಿಷ್ಯವೇತನ
8) ಸಂಚಿ ಹೊನ್ನಮ್ಮ ಶಿಷ್ಯವೇತನ (ವಿದ್ಯಾರ್ಥಿನಿಯರಿಗಾಗಿ)



ಪ್ರಾಚಾರ್ಯರ ಕೋಣೆ

## ◈ ಪುರಸ್ಕಾರಗಳು ಹಾಗೂ ದತ್ತಿ ನಿಧಿ :

1) ಪ್ರೋ. ಎಂ. ಪಿ. ನೀಲಕಂಠಮಠ ರಿಂದ ಪಂಚಾಕ್ಷರಿಸ್ವಾಮಿಗಳು ನೀಲಕಂಠಮಠರ ಸ್ಮರಣಾರ್ಥ ದತ್ತಿ ನಿಧಿ
2) ಡಾ. ಎಸ .ಆರ. ಮಠ ರಿಂದ ಕು.ಅಶ್ವಿನಿ ಶಿವಕುಮಾರಮಠ ಸ್ಮರಣಾರ್ಥ ದತ್ತಿ ನಿಧಿ
3) ಡಾ. ಎಸ. ಆರ. ಮಠ ರಿಂದ ಕು.ವೀರಭದ್ರಯ್ಯ ಶಿವಕುಮಾರ ಮಠ ಸ್ಮರಣಾರ್ಥ ದತ್ತಿ ನಿಧಿ
4) ವಾಣಿಜ್ಯ ವಿಭಾಗದ ಪ್ರಾಧ್ಯಾಪಕರ ದತ್ತಿ ನಿಧಿ
5) ಮಹಾವಿದ್ಯಾಲಯದ ವಿವಿಧ ವಿಷಯಗಳ ಪ್ರಾಧ್ಯಾಪಕರಿಂದ ನಗದು ಪುರಸ್ಕಾರ
6) ಡಾ.ಎಸ.ಆರ. ಮಠ ರಿಂದ ಕು.ವೀರಮ್ಮ ಶಿವಕುಮಾರ ಮಠ ಸ್ಮರಣಾರ್ಥ ದತ್ತಿ ನಿಧಿ
7) ವಾಣಿಜ್ಯ ವಿಭಾಗದಲ್ಲಿ ಕಾಲೇಜಿಗೆ ಪ್ರಥಮ
8) ಶ್ರೀ ವಿಜಯಕುಮಾರ ಮದ್ರಾಸರಿಂದ ರುಕ್ಮೀಣಿ ಬಾಯಿ ಬಿಂಜಲಭಾವಿ ಸ್ಮರಣಾರ್ಥ ದತ್ತಿ ನಿಧಿ
9) ಮಹೇಶ ಯ ಅವಟಿಯವರಿಂದ ಯಮನಪ್ಪ ಅವಟಿ ಇವರ ಸ್ಮರಣಾರ್ಥ ದತ್ತಿ ನಿಧಿ
10) ಬಸವರಾಜ ದೊಡಮನಿಯವರಿಂದ
11) ಸಂಗಮೇಶ ಗುಂಡಳ್ಳಿಯವರಿಂದ ಹೆಚ್ ಬಿ ನಡಹಳ್ಳಿ ನಿವೃತ್ತ ಶಿಕ್ಷಕರು ಇವರ ಸ್ಮರಣಾರ್ಥ ದತ್ತಿ ನಿಧಿ



ಎನ್ ಎಸ್ ಎಸ್ ಕಾರ್ಯ



ಗ್ರಂಥಾಲಯ




ವಸತಿ ನಿಲಯ



ಸಭಾಭವನ



ಭಾಷಾ ಪ್ರಯೋಗಾಲಯ



ಗಣಕಯಂತ್ರದ ಪ್ರಯೋಗಾಲಯ



ಸಂಸ್ಕೃತಿಕ ಕಾರ್ಯಕ್ರಮ



ಮಲ್ಟಿ ಜಿಮ್

# ಮಹಾವಿದ್ಯಾಲಯದ ಸಾಧಕರು



ರಾಣಿಚನ್ನಮ್ಮ ವಿಶ್ವ ವಿದ್ಯಾಲಯಕ್ಕೆ 6 ನೇ ರ್‍ಯಾಂಕ



ರಾಣಿಚನ್ನಮ್ಮ ವಿಶ್ವ ವಿದ್ಯಾಲಯಕ್ಕೆ ಕಬಡ್ಡಿ ಬ್ಲೂ

## ಕ್ರೀಡಾ ಚಟುವಟಿಕೆಗಳು





